ಹೇಳಿದ್ದಾರೆ. I will get it re-examined. If there is any accident the KSRTC is bound to pay the componsation. ಅವನು ಬಡವ ಇರಲಿ, ಶ್ರೀಮಂತ ಇರಲಿ, ಆಕ್ಸಿಡೆಂಟ್ ಆಗಿದ್ದರೆ ಕೊಟ್ಟೇಕೊಡಬೇಕಾಗುತ್ತದೆ. ನಾನು ಉತ್ತರ ಕೊಟ್ಟಿರತಕ್ಕಂತಾದ್ದರಲ್ಲಿ no vehicle of KSRTC met with an accident near Alpur in T.Narasipur Taluk. Probably, the name of the village might be this side or that side and the off cials as you know when you ask a particular question, they will reply in a particular manner. ಆ ಕಾರಣ ಹೆಚ್ಚು ಕಡಿಮೆ ಆಗಿರುತ್ತದೆ. I did not mention something unusual. I will find out the truth from Police report also...

ವಿಷಯ:- ನೆಲಮಂಗಲ ಕ್ಷೇತ್ರದ ಪರಿಶಿಷ್ಟ ಜಾತಿ/ವರ್ಗದವರು ಹೊಂದಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 433 (1563)

ಶ್ರೀ ಆಂಜನಮೂರ್ತಿ (ನೆಲಮಂಗಲ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

(ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ನ್ಯಾಯಬೆಲೆ ಅಂಗಡಿಗಳಿವೆ?

(ಆ) ಅವುಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಪರವಾನಗಿ ನೀಡಲಾಗಿದೆ (ಪೂರ್ಣ ವಿವರಕೊಡುವುದು)?

(ಇ) ಅವುಗಳಲ್ಲಿ ಶೇಕಡ 18ರಂತೆ ಮೀಸಲಾತಿಯ ಪ್ರಕಾರ ನೀಡದಿದ್ದರೆ ಅದನ್ನು ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಟಿ.ಎನ್.ನರಸಿಂಹಮೂರ್ತಿ(ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

(ಅ) 80

(ಆ) ಈ ಪೈಕಿ ಒಬ್ಬರಿಗೆ ಮಾತ್ರ ಪರಿಶಿಷ್ಟ ಜಾತಿ ಯವರಿಗೆ ಪರವಾನಗಿ ನೀಡಲಾಗಿದೆ. ವಿವರ ಈ ಕೆಳಕಂಡಂತೆ ಇದೆ.

ಶ್ರಿ ಎಲ್. ಕೃಷ್ಣಮೂರ್ತಿ,
ನಂ.86, ಲೋಹಿತ್ ನಗರ, ನೆಲಮಂಗಲ.

(ಇ) ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವಲ್ಲಿ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದವರಿಗೆ ಆಧ್ಯತೆ ನೀಡಲು ಸರ್ಕಾರವು ಈಗಾಗಲೇ ಸಂಬಂಧಪಟ್ಟವರಿಗೆ ಸೂಚನೆ ನೀಡಿದೆ, ಆದರೂ ಈ ವಿಷಯದಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲದಿರುವುದು ಮನಗಂಡು ನ್ಯಾಯಬೆಲೆ ಅಂಗಡಿಗಳನ್ನು ನೀಡುವಾಗ ಮೊದಲ ಆಧ್ಯತೆಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ನೀಡುವಂತೆ ಹಾಗೂ ಈ ವರ್ಗದವರಿಗೆ ಕನಿಷ್ಠ ಶೇಕಡ 20 ರಷ್ಟು ಪ್ರಾತಿನಿಧ್ಯ ನೀಡಲು ಸರ್ಕಾರ ಆದೇಶ ಹೊರಡಿಸಿದೆ.

ಶ್ರೀ ಆಂಜನಮೂರ್ತಿ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಏನೆಂದರೆ ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ನ್ಯಾಯಬೆಲೆ ಅಂಗಡಿಗಳು ಇವೆ, ಅವುಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪರವಾನಿಗೆ ನೀಡಲಾಗಿದೆ (ಪೂರ್ಣ ವಿವರ ಕೊಡುವುದು) ಅಂತ ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ನ್ಯಾಯಬೆಲೆ ಅಂಗಡಿಗಳು 80 ಇವೆ ಎಂದು ಹೇಳಿದ್ದಾರೆ. ಅವುಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೊಡಲಾಗಿದೆ ಎನ್ನುವುದಕ್ಕೆ ಒಬ್ಬರಿಗೆ ಎಂದು ಹೇಳಿದ್ದಾರೆ; ಆದರೆ ಎಷ್ಟು ಅಪ್ಲಿಕೇಷನ್ನು ಬಂದಿದೆ ಎಂದು ಹೇಳಲಿಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ, ಈ

ಹರಿಜನ ಮತ್ತು ಗಿರಿಜನ ಮಕ್ಕಳು ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ನೀವು ಒಂದು ಷರತ್ತು ಹಾಕಿದ್ದೀರಿ, ಅದೇನೆಂದರೆ ಅವರು 10-20 ಸಾವಿರ ರೂಪಾಯಿಗಳು ಡಿಪಾಸಿಟ್ ಮಾಡಬೇಕೆಂದು. ಆ 10-20 ಸಾವಿರ ರೂಪಾಯಿಗಳ ಡಿಪಾಸಿಟ್ ಹಣ ಆ ಬಡಮಕ್ಕಳಿಗೆ ಕೊಡಲು ಸಾಧ್ಯವಾಗುವುದಿದ್ದಿಲ್ಲ. ಆದ್ದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫೈನಾನ್ಸ್ ಕಾರ್ಪೊರೇಷನ್ ಮುಖಾಂತರ ಧನಸಹಾಯ ಮಾಡಿದರೆ ಖಂಡಿತವಾಗಿ ಉಪಕಾರವಾಗುತ್ತದೆ. ಅದೇ ಸಂದರ್ಭದಲ್ಲಿ ನಾನು ಮಾನ್ಯ ಸಚಿವರ ಗಮನಕ್ಕೆ ಮತ್ತೊಂದು ವಿಷಯ ತರುವುದೇನೆಂದರೆ ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಆಫೀಸಿನಲ್ಲಿ ನರಭಕ್ಷಕರು ಇದ್ದಾರೆ. ಅವರು ಒಂದೊಂದು ಲೈಸೆನ್ಸ್‌ಗೆ 20 ಸಾವಿರ ರೂಪಾಯಿಗಳಿಂದ 80 ಸಾವಿರ ರೂಪಾಯಿಗಳವರೆಗೂ ಡಿಮ್ಯಾಂಡ್ ಮಾಡುತ್ತಾರೆ. ಒಂದು ಲೈಸೆನ್ಸ್ ಕೊಡಬೇಕಾದರೆ ಅದಕ್ಕೆ ತಾವು ಒಂದು ಕಟ್ಟುನಿಟ್ಟಾದ ಆದೇಶ ಹೊರಡಿಸಬೇಕು. ಮಾನ್ಯ ಮಂತ್ರಿಗಳು ಈ ಬಗ್ಗೆ ಒಂದು ತನಿಕೆ ನಡೆಸಿ ಆ ಬಡವರಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಬೇಕು. 18 ಪರ್‌ಸೆಂಟ್ ಖೋಟಾದಲ್ಲಿ ಇದುವರೆಗೂ ಕೊಟ್ಟಿರುವ 80 ಜನರಲ್ಲಿ ಒಬ್ಬರಿಗೆ ಕೊಟ್ಟಿದ್ದೀರಿ ಅಂದರೆ 18 ಪರ್‌ಸೆಂಟ್ ತುಂಬಲು ಸೂಕ್ತ ಕ್ರಮ ತೆಗೆದುಕೊಂಡಿಲ್ಲವೆಂದು ಅರ್ಥ ಮಾಡಿಕೊಳ್ಳಬಹುದು.

ಶ್ರೀ ಟಿ. ಎನ್. ನರಸಿಂಹಮೂರ್ತಿ:- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಬಂದಂತಹ ಅನೇಕ ರೀತಿಯ ಒತ್ತಡಗಳನ್ನು ಗಮನಿಸಿ ಸರ್ಕಾರ ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಆದರಲ್ಲೂ ನಿರುದ್ಯೋಗಿ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಶೇಕಡ 20ರಷ್ಟು ನ್ಯಾಯ ಬೆಲೆ ಅಂಗಡಿಗಳನ್ನು ಅವರಿಗೆ ಮೀಸಲಾಗಿಡ ಬೇಕೆಂದು ಸುತ್ತೋಲೆಯನ್ನು ದಿನಾಂಕ 19-3-91ರಲ್ಲಿ ಹೊರಡಿಸಿದ್ದೇವೆ. ಆ ಮೂಲಕ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಎಚ್ಚರಿಕೆ ನೀಡಲಾಗಿದೆ. ತಾವು ಒಂದೊಂದು ಲೈಸೆನ್ಸ್ ಕೊಡಲಿಕ್ಕೆ ಇಂತಿಷ್ಟು ಹಣ ಬೇಡುತ್ತಿದ್ದಾರೆಂದು ಹೇಳುತ್ತಿದ್ದೀರಿ. ನಿರ್ದಿಷ್ಟವಾಗಿ ಇರುವ ವಿಚಾರ ಹೇಳುವುದಾದರೆ, ನಮ್ಮ ಕನಸಿನಲ್ಲೂ ಅಂತ ಅಧಿಕಾರಿಗಳನ್ನು ನಾವು ಇಟ್ಟುಕೊಳ್ಳುವುದಕ್ಕೆ ತಯಾರಾಗಿಲ್ಲ. ನಿರ್ದಿಷ್ಟವಾಗಿ ತಾವು ಯಾರ ಬಗ್ಗೆಯಾದರೂ ಹೇಳಿದರೆ ಕ್ರಮ ತೆಗೆದುಕೊಳ್ಳುತ್ತೇನೆ. ನಾವು ಮೊದಲನೆಯದಾಗಿ ಈ ವರ್ಗದವರಿಗೆ ಸಾಮಾಜಿಕ ನ್ಯಾಯ ಕೊಡಬೇಕೆನ್ನುವ ನಿಲುವು ತೆಗೆದುಕೊಂಡಿದ್ದೇವೆ, ಹಾಗೂ ಮುಂದಿನ ಸಾಲಿನಲ್ಲಿ ಪರಿಸ್ಥಿತಿಯನ್ನು ಸುಧಾರಣೆ ಮಾಡುತ್ತೇವೆ.

ಶ್ರೀ ಆಂಜನಮೂರ್ತಿ:- ಇದರ ಬಗ್ಗೆ ತಾವು ಸುತ್ತೋಲೆ ಕಳುಹಿಸಿ 20 ಪರ್‌ಸೆಂಟ್ ಮಾಡಲಿಕ್ಕೆ ಹೊರಟಿರುವುದು ಸಂತೋಷ. ಆದರೆ ನನ್ನ ಇನ್ನೊಂದು ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲ್ಲಿಲ್ಲ. ಅದೇನೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಇದುವ ಫೈನಾನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ವತಿಯಿಂದ ಇವರಿಗೆ ಧನಸಹಾಯ ಮಾಡಿ ಅವರು ಡಿಫಾಸಿಟ್ ಮಾಡಿದರೆ ಲೈಸೆನ್ಸ್ ತೆಗೆದುಕೊಂಡು ಜೀವನ ಮಾಡಲಿಕ್ಕೆ ಸಹಾಯವಾಗುತ್ತದೆ. ಇದರ ಬಗ್ಗೆ ಹೇಳಿಕೆ ಕೊಡಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ:- ಆಹಾರ ಇಲಾಖೆಯಲ್ಲಿ ಮಾತ್ರ ನ್ಯಾಯಬೆಲೆ ಅಂಗಡಿಗಳನ್ನು ಕೊಡುವ ಅಧಿಕಾರ ಇದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಹಣಕಾಸು ಸಾಲ ಕೊಡಿಸಬೇಕು ಎಂದು ಏನು ಹೇಳಿದರು ಅದಕ್ಕೆ ಬೇರೆ ನನ್ನ ಸ್ನೇಹಿತ ಮಂತ್ರಿಗಳು ಇದ್ದಾರೆ. ಈ ಪ್ರಶ್ನೆಯನ್ನು ತಾವು ಅವರಲ್ಲಿ ಕೇಳಬಹುದು.

ವಿಷಯ:- ಶಾಂತಿನಗರ ಕ್ಷೇತ್ರದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಆಗುತ್ತಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 422 (2125)

ಶ್ರೀ ಎಮ್. ಮುನಿಸ್ವಾಮಿ (ಶಾಂತಿನಗರ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?